# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ವೆಚ್ಚದಲ್ಲಿ ಸಚಿವಾಲಯದ ಅಧಿಕಾರಿಗಳು ಕನ್ನಡ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಹೆಚ್ಚುವರಿಯಾಗಿ ಪಡೆಯುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 9 ಸಗ್ರನಿ 98 ದಿನಾಂಕ: 17-02-1998.
2. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 17 ಸಗ್ರನಿ 97 ದಿನಾಂಕ: 27-06-1998.
3. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 55 ಸಗ್ರಇ 98 ದಿನಾಂಕ: 6-04-2000.
4. ದಿನಾಂಕ: 23-07-2002 ರಂದು ನಡೆದ ಸಚಿವಾಲಯ ಗ್ರಂಥಾಲಯ ಸಮಿತಿ ಸಭೆಯ ಠರಾವು ಸಂಖ್ಯೆ 13.

ಪ್ರಸ್ತಾವನೆ:

(2)ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಸಚಿವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಉಪ ಕಾರ್ಯದರ್ಶಿ ಹಾಗೂ ಮೇಲ್ದರ್ಜೆ ಅಧಿಕಾರಿಗಳು ಕಚೇರಿಯ ಉಪಯೋಗಕ್ಕಾಗಿ ಸರ್ಕಾರಿ ವೆಚ್ಚದಲ್ಲಿ ನಿರ್ದಿಷ್ಠ ಸಂಖ್ಯೆಯ ದಿನಪತ್ರಿಕೆ/ನಿಯತಕಾಲಿಕೆಗಳನ್ನು ಪಡೆಯಲು ಅನುಮತಿ ನೀಡಲಾಗಿದೆ. ಈ ಹಿಂದೆ ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ ಎರಡು ಸ್ಥಳೀಯ ದಿನಪತ್ರಿಕೆಗಳನ್ನು ಸರ್ಕಾರಿ ವೆಚ್ಚದಲ್ಲಿ ಪಡೆಯಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾಪಿಸಲಾಗಿತ್ತು ಆದರೆ ಆ ಇಲಾಖೆಯು ಒಂದು ಸ್ಥಳೀಯ ದಿನಪತ್ರಿಕೆ ಪಡೆಯಲು ಅನುಮತಿ ನೀಡಲು ಸಹಮತಿಯನ್ನು ನೀಡಿರುತ್ತದೆ. ಅದರಂತೆಯೇ (3) ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಸರ್ಕಾರದ ಅಧೀನ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳಿಗೆ ಕಚೇರಿ ಉಪಯೋಗಕ್ಕಾಗಿ ಸರ್ಕಾರಿ ವೆಚ್ಚದಲ್ಲಿ ಒಂದು ಸ್ಥಳೀಯ ದಿನಪತ್ರಿಕೆ ಪಡೆಯಲು ಅನುಮತಿ ನೀಡಲಾಗಿದೆ.

ದಿನಾಂಕ 23.07.2002 ರಂದು ನಡೆದ ಸಚಿವಾಲಯ ಗ್ರಂಥಾಲಯದ ಸಮಿತಿ ಸಭೆಯಲ್ಲಿ ಸಮಿತಿಯು ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಮೇಲ್ದರ್ಜೆ ಅಧಿಕಾರಿಗಳು ಇನ್ನೂ ಒಂದು ಕನ್ನಡ ದಿನಪತ್ರಿಕೆ ಮತ್ತು ಒಂದು ಕನ್ನಡ ನಿಯತಕಾಲಿಕೆಯನ್ನು ಹೆಚ್ಚುವರಿಯಾಗಿ ಕಚೇರಿಯ ಉಪಯೋಗಕ್ಕಾಗಿ ಸರ್ಕಾರಿ ವೆಚ್ಚದಲ್ಲಿ ಪಡೆಯಲು ಅನುಮತಿ ನೀಡಲು ತೀರ್ಮಾನಿಸಿದೆ. ಈ ವಿಷಯದ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿದಾಗ ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ತನ್ನ ಒಪ್ಪಿಗೆಯನ್ನು ನೀಡಿರುತ್ತದೆ ಮತ್ತು ಆಡಳಿತ ಇಲಾಖೆ ಪ್ರಸ್ತಾಪಿಸಿರುವ ಪ್ರಸ್ತಾವನೆ ಜೊತೆಗೆ ಅಧೀನ ಕಾರ್ಯದರ್ಶಿಗಳ ಹಂತದಲ್ಲಿ ಒದಗಿಸಲಾಗುತ್ತಿರುವ ಒಂದು ದಿನಪತ್ರಿಕೆಯ ಜೊತೆಗೆ ಮೊದಲು ಶಿಫಾರಸ್ಸು ಮಾಡಿದ್ದಂತೆ ಇನ್ನೊಂದು ಕನ್ನಡ ದಿನಪತ್ರಿಕೆಯನ್ನು ಒದಗಿಸುವ ಪ್ರಸ್ತಾವನೆಗೆ ಸಹ ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಆದ್ದರಿಂದ ಸರ್ಕಾರ ಈ ಕೆಳಕಂಡಂತೆ ಆದೇಶಿಸುತ್ತದೆ.

## ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸಗ್ರನಿ 2002, ಬೆಂಗಳೂರು ದಿನಾಂಕ: 26-10-2002

ಪ್ರಸ್ತಾವನೆಯಲ್ಲಿ ತಿಳಿಸಿದ ಕಾರಣಗಳಿಂದಾಗಿ ಸಚಿವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಉಪ ಕಾರ್ಯದರ್ಶಿ ಹಾಗೂ ಮೇಲ್ಪಟ್ಟ ಅಧಿಕಾರಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 17 ಸಗ್ರನಿ 97 ದಿನಾಂಕ 27-6-98 ರನ್ವಯ ಪಡೆಯುತ್ತಿರುವ ದಿನಪತ್ರಿಕೆ/ನಿಯತಕಾಲಿಕೆಗಳ ಜೊತೆಗೆ ಒಂದು ಕನ್ನಡ ದಿನಪತ್ರಿಕೆ ಹಾಗೂ ಒಂದು ಕನ್ನಡ ನಿಯತಕಾಲಿಕೆಯನ್ನು ಹೆಚ್ಚುವರಿಯಾಗಿ ಕಚೇರಿಯ

ಉಪಯೋಗಕ್ಕಾಗಿ ಸರ್ಕಾರಿ ವೆಚ್ಚದಲ್ಲಿ ಪಡೆಯಲು ಅನುಮತಿ ನೀಡಲಾಗಿದೆ ಮತ್ತು ಸಚಿವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಧೀನ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 55 ಸಗ್ರಇ 98, ದಿನಾಂಕ: 6-4-2000 ರನ್ವಯ ಪಡೆಯುತ್ತಿರುವ ಒಂದು ಸ್ಥಳೀಯ ದಿನಪತ್ರಿಕೆ ಜೊತೆಗೆ ಇನ್ನೊಂದು ಕನ್ನಡ ದಿನಪತ್ರಿಕೆಯನ್ನು ಸರ್ಕಾರಿ ವೆಚ್ಚದಲ್ಲಿ ಕಚೇರಿಯ ಉಪಯೋಗಕ್ಕಾಗಿ ಪಡೆಯಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ದಿನಪತ್ರಿಕೆಗೆ/ನಿಯತಕಾಲಿಕೆಗಳಿಗೆ ಸಂಬಂಧಿಸಿದ ಬಿಲ್‌ಗಳ ಮೇಲೆ ಅಗತ್ಯ ಧೃಢೀಕರಣ ಮಾಡಿ ಪ್ರತಿ ಮೂರು ತಿಂಗಳಿಗೊಮ್ಮೆ ಸಿಆಸುಇ (ಲೆಕ್ಕಪತ್ರ) ವಿಭಾಗದಿಂದ ಹಣ ಮರುಪಾವತಿ ಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು ಸಚಿವಾಲಯ ಗ್ರಂಥಾಲಯಕ್ಕೆ ಹಂಚಿಕೆಯಾದ ಲೆಕ್ಕ ಶೀರ್ಷಿಕೆ 2052-00-090-0-01-060 ಇತರೆ ವೆಚ್ಚಗಳು ರ ಅಡಿಯಲ್ಲಿ ಭರಿಸತಕ್ಕದ್ದು.

ಹಳೆ ದಿನಪತ್ರಿಕೆಗಳನ್ನು ಆಯಾ ಕಚೇರಿ ಹಂತದಲ್ಲಿಯೇ ವಿಲೇವಾರಿ ಮಾಡಿಕೊಳ್ಳಬಹುದಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆ.ಇ 1829 ವೆಚ್ಚ-5/2002 ದಿನಾಂಕ: 3-10-2002 ರಲ್ಲಿ ನೀಡಿದ ಒಪ್ಪಿಗೆಯ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ
ಸಹಿ/-
(ಡೇನಿಯಲ್ ಬರೆಟ್ಟೊ)
ಮುಖ್ಯ ಗ್ರಂಥಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಸಚಿವಾಲಯ (ಗ್ರಂಥಾಲಯ)

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು.
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಆಯುಕ್ತರ ಆಪ್ತ ಕಾರ್ಯದರ್ಶಿಯವರು.
4. ಸರ್ಕಾರದ ಎಲ್ಲಾ ಕಾರ್ಯದರ್ಶಿಯವರು.
5. ಸರ್ಕಾರದ ಎಲ್ಲಾ ಅಪರ/ಸಹ ಕಾರ್ಯದರ್ಶಿಯವರು.
6. ಸರ್ಕಾರದ ಎಲ್ಲಾ ಉಪಕಾರ್ಯದರ್ಶಿಯವರು.
7. ಸರ್ಕಾರದ ಅಧೀನ ಕಾರ್ಯದರ್ಶಿಯವರು, ಸಿ.ಆ.ಸು.ಇ (ಲೆಕ್ಕಪತ್ರ-2)/ಆರ್ಥಿಕ ಇಲಾಖೆ (ವೆಚ್ಚ-3).
8. ಸರ್ಕಾರದ ಎಲ್ಲಾ ಅಧೀನ ಕಾರ್ಯದರ್ಶಿಗಳು.
9. ಶಾಖಾಧಿಕಾರಿ ಸಿ.ಆ.ಸು.ಇ (ಲೆಕ್ಕಪತ್ರ-2) ಶಾಖೆ.
10. ಉಪ ಗ್ರಂಥಾಧಿಕಾರಿ, ಸಚಿವಾಲಯ ಗ್ರಂಥಾಲಯ, (ವಿಧಾನ ಸೌಧ)/ಬಹುಮಹಡಿ ಕಟ್ಟಡ ಶಾಖೆ.
11. ಹೆಚ್ಚುವರಿ ಪತ್ರಿಗಳು.